ಭಾಷಾ ಬೋಧನೆ | ವಿಷಯವನ್ನು ಸಂದರ್ಭದೊಡನೆ ಬೆಸೆಯುವುದು

ಕಮಲಾ ಭಂಡಾರಿ

ಇಂದಿನ ಸನ್ನಿವೇಶದಲ್ಲಿ, ಮಕ್ಕಳು ಭಾಷೆಯ ಬಗೆಗಿನ ತಮ್ಮ ತಿಳುವಳಿಕೆಯನ್ನು ಬೆಳೆಸಿಕೊಳ್ಳುವುದರಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎನ್ನುವುದು ಸರ್ವೇಸಾಮಾನ್ಯವಾದ ಸಂಗತಿಯಾಗಿದೆ ಹಾಗೂ ಬಹಳಷ್ಟು ಶಿಕ್ಷಕರೂ ಆಗಿಂದಾಗ್ಗೆ ಇದನ್ನೇ ಹೇಳುತ್ತಿದ್ದಾರೆ. ಭಾಷೆಯನ್ನು ಬೋಧಿಸುವ ಪ್ರಕ್ರಿಯೆಯಲ್ಲಿ ಹಲವಾರು ಹಂತಗಳಿವೆ ಎನ್ನುವುದನ್ನು ನಾನು ತರಗತಿಯಲ್ಲಿ ಅಧ್ಯಾಪನದ ಬಳಿಕ ಅರಿತುಕೊಂಡೆ. ಕೃಷ್ಣಕುಮಾರ್ ಅವರ 'ದಿ ಚೈಲ್ಡ್ಸ್ ಲ್ಯಾಂಗ್ವೇಜ್ ಆಂಡ್ ದಿ ಟೀಚರ್' (The Child's Language and The Teacher) ಎಂಬ ಪುಸ್ತಕದಲ್ಲಿ ಈ ಪ್ರಕ್ರಿಯೆಗಳ ಬಗ್ಗೆ ಪುರಾವೆಗಳನ್ನು ಕಾಣಬಹುದು. ಮಕ್ಕಳ ಪರಿಸರದೊಂದಿಗೆ ಶಾಲೆಯ ಜ್ಞಾನವೂ ಸಮೀಕರಿಸಬೇಕು ಎನ್ನುವುದನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (National Curriculum Framework- NCF, 2005) ಸಹ ಸಮರ್ಥಿಸುತ್ತದೆ. ಇದು ಸಾಧ್ಯವಾದಾಗಲಷ್ಟೇ ಅವರ ಆಲೋಚನೆಗೆ ಮತ್ತು ವಿವೇಚನಾಶಕ್ತಿಗೆ ಸಾಕಷ್ಟು ಅವಕಾಶಗಳು ಒದಗಿದಂತಾಗಿ ಮಕ್ಕಳ ಕಲಿಕೆ ಆರಂಭವಾಗುತ್ತದೆ.

ಸಾಧಾರಣವಾಗಿ ಮಕ್ಕಳು 3ನೇ ತರಗತಿಗೆ ಬರುವ ಹೊತ್ತಿಗಾಗಲೇ ತಮ್ಮ ಮಾತೃಭಾಷೆಯ ಸಮೃದ್ಧ ಜ್ಞಾನವನ್ನು ಅವರು ಹೊಂದಿರುತ್ತಾರೆ. ಜೊತೆಗೆ ತಮ್ಮ ಭಾವನೆಗಳ ಅಭಿವ್ಯಕ್ತಿಗೆ ಬೇಕಾದ ಪದಗಳು ಹಾಗೂ ವಾಕ್ಯಗಳ ಬಗೆಗಿನ ತಿಳುವಳಿಕೆಯು ಲಭಿಸಿರುತ್ತದೆ. ತಮ್ಮ ಅಗತ್ಯಗಳ ಕುರಿತು, ಚೆನ್ನಾಗಿ ತಿಳಿದಿರುತ್ತಾರೆ ಮತ್ತು ಅದನ್ನು ಮಾತಿನಲ್ಲಿಯೂ ವ್ಯಕ್ತಪಡಿಸಬಲ್ಲರು. ಈ ಪದಸಂಪತ್ತನ್ನು ಯಾರೂ ಅವರಿಗೆ ಹೇಳಿಕೊಡದಿದ್ದರೂ ಮನೆಯ ಹಿರಿಯರ ಮನವೊಲಿಸುವ ವಿಧಾನಗಳನ್ನು ಚೆನ್ನಾಗಿ ಅರಿತಿರುತ್ತಾರೆ. ಮಕ್ಕಳು ತಮ್ಮ ಮನೆಯ ಪರಿಸರ, ಸಂವಾದಗಳು ಹಾಗೂ ಅವಕಾಶಗಳನ್ನು ಗಮನಿಸಿ ಎಲ್ಲವನ್ನೂ ಸ್ವತಃ ತಾವೇ ಕಲಿತಿರುತ್ತಾರೆ. ಹಿರಿಯರ ಮುಖ–ಭಾವಗಳನ್ನು ನೋಡಿಯೇ ಅವರನ್ನು ಯಾವಾಗ ಮತ್ತು ಹೇಗೆ ಒಪ್ಪಿಸಬೇಕೆಂಬುದನ್ನು ತಿಳಿದಿರುತ್ತಾರೆ. ಒಂದು ನಿರ್ದಿಷ್ಟ ಸಮಯದಲ್ಲಿ ಮಾತನಾಡಬೇಕೇ ಬೇಡವೇ ಹಾಗೂ ಯಾವಾಗ ಮಾತನಾಡಿದರೆ ತಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಾರೆ ಎಂಬುದನ್ನೂ ತಿಳಿದಿರುತ್ತಾರೆ.

ಮನೆಯಲ್ಲಿ ಮಾತನಾಡಲು ಹಾಗೂ ಪದಗಳು ಮತ್ತು ವಾಕ್ಯಗಳನ್ನು ಪುನರಾವರ್ತಿಸಲು ಅವಕಾಶಗಳು ಸಿಗುತ್ತವೆ ಹಾಗೂ ಅಂತಹ ಪರಿಸರದಲ್ಲಿ ಅವರು ಪದಗಳ ಬಳಕೆ, ವಾಕ್ಯಗಳ ರಚನೆ ಹಾಗೂ ತಾವೇ ಮಾತನಾಡಲು ಕಲಿಯುತ್ತಾರೆ. ಭಾಷೆಗೆ ತನ್ನದೇ ಆದ ನಿಯಮಗಳಿವೆ ಹಾಗೂ ತನ್ನದೇ ಆದ ಕ್ರಮಗಳನ್ನೂ ಹೊಂದಿದೆ. ಮಕ್ಕಳು ಅವುಗಳನ್ನು ಸಮರ್ಥವಾಗಿ ಬಳಸುತ್ತಾರೆ. ಮನೆಯಲ್ಲಿ ಸಮೃದ್ಧ ಭಾಷಾ ಪರಿಸರವಿದ್ದಲ್ಲಿ ಅವರು ಮನೆಯ ಭಾಷೆಯನ್ನು ಉತ್ತಮವಾಗಿ ಮಾತನಾಡಲು ಹಾಗೂ ಓದಲು ಕಲಿಯುತ್ತಾರೆ. ಶಾಲೆಯಲ್ಲಿ ಭಾಷಾ ಕಲಿಕೆಯ ಸನ್ನಿವೇಶವನ್ನು ನಿರ್ಮಿಸಿದರೆ ಹಾಗೂ ಒಂದು ಸಮೃದ್ಧ ಭಾಷಾ ಪರಿಸರವನ್ನು ಒದಗಿಸಿದಲ್ಲಿ ಓದುವ ಹಾಗೂ ಬರೆಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ.

ಎನ್‌ಸಿಎಫ್ 2005ರಲ್ಲಿ ಸೂಚಿಸಿರುವ ಪ್ರಕಾರ, ಉರುಹೊಡೆದು ಕಲಿಯುವ ಪದ್ಧತಿಗಿಂತ ಮಕ್ಕಳು ಅಗತ್ಯವಾದ ಜ್ಞಾನವನ್ನು ಅರ್ಥೈಸಿಕೊಂಡು ಕಲಿಯುವುದಕ್ಕೆ ಬೇಕಾದ ಹಾಗೆ 1ರಿಂದ 12ನೇ ತರಗತಿಯ ಪಠ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಜೊತೆಯಲ್ಲಿ ಅವರು ತಮ್ಮ ಪುಸ್ತಕದ ಜ್ಞಾನವನ್ನು ಸಮಾಜದ ಸನ್ನಿವೇಶಗಳಿಗೆ ಹೊಂದಿಕೆಯಾಗುವಂತೆ ಬಳಸುತ್ತ ದೇಶ ಕಟ್ಟುವ ಕಾರ್ಯದಲ್ಲಿ ಮುಖ್ಯವಾದ ಭೂಮಿಕೆಯನ್ನು ನಿರ್ವಹಿಸಬಹುದು. ಮಕ್ಕಳ ಶಾಲಾ ಜೀವನವು ಅವರ ನಿತ್ಯ ಜೀವನದೊಂದಿಗೂ ಸಮೀಕರಿಸುವಂತಿರ–ಬೇಕೆಂದು ಎನ್‌ಸಿಎಫ್ 2005 ಸೂಚಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (National Education Policy -NEP, 1986) ವಿವರಿಸಿರುವಂತೆ ಮಗು–ಕೇಂದ್ರಿತ ವ್ಯವಸ್ಥೆಯತ್ತ ಸಾಗುವ ದೀರ್ಘ ಪಯಣದಲ್ಲಿ ಈ ಸಮೀಕರಣ ಸಹಾಯ ಮಾಡುತ್ತದೆ. ಆನಂತರ ಬಂದುದೇ ಕಪ್ಪುಹಲಗೆಯ ಕಾರ್ಯಾಚರಣೆ (Operation Blackboard). ಇದರಲ್ಲಿ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವುದು ಹಾಗೂ ಶಿಕ್ಷಕರನ್ನು ಸಜ್ಜುಗೊಳಿಸುವುದು ಇತ್ಯಾದಿಗಳು ಮುಖ್ಯ ಉದ್ದೇಶವಾಗಿತ್ತು. ಇದಕ್ಕಾಗಿ 3 ಅಡಿ ಉದ್ದದ ಕಪ್ಪು ಪಟ್ಟಿಯನ್ನು ಮಕ್ಕಳು ಚಿತ್ರ ಬಿಡಿಸಲು ಹಾಗೂ ತಮ್ಮ ಕೆಲಸವನ್ನು ಮಾಡಲು ಅನುಕೂಲವಾಗುವಂತೆ ತರಗತಿ ಕೊಠಡಿಗಳ ಗೋಡೆಯ ಮೇಲೆ ಕಪ್ಪುಹಲಗೆಯಂತೆ ನೇತುಹಾಕಲಾಯಿತು.

ಭಾಷೆಯನ್ನು ಕಲಿಸಲು ಈ ವಿಧಾನವನ್ನು ನಾನು 1ನೇ ತರಗತಿಯಿಂದಲೇ ಅಳವಡಿಸಿಕೊಂಡಿದ್ದೇನೆ. ಮಕ್ಕಳ ಮನೆವಾರ್ತೆ, ಅವರ ಪರಿಸರದಿಂದ ಅಥವಾ ಆಯಾ ಸಂದರ್ಭದಲ್ಲಿ ಬಳಸುವ ಸ್ಥಳೀಯ ಪದಗಳನ್ನು ಅಥವಾ ಹಣ್ಣುಗಳು, ಮರಗಳು, ತರಕಾರಿಗಳ ಹೆಸರನ್ನು ನಾನು ಆರಿಸಿಕೊಳ್ಳುತ್ತೇನೆ. ಮಕ್ಕಳು ಇವುಗಳೊಂದಿಗೆ ಪರಿಚಿತರಾಗಿರುತ್ತಾರೆ. ನಂತರ ಅವುಗಳ ಚಿತ್ರವನ್ನು ಕಪ್ಪುಹಲಗೆಯ ಮೇಲೆ ಬಿಡಿಸುತ್ತೇನೆ. ಮಕ್ಕಳು ಚಿತ್ರವನ್ನು ನೋಡಿ ಗುರುತು ಹಿಡಿದು ಅವುಗಳ ಬಗ್ಗೆ ಒಂದೆರಡು ವಾಕ್ಯಗಳನ್ನು ಹೇಳುತ್ತಾರೆ. ಮಕ್ಕಳು ತಮ್ಮ ಪುಸ್ತಕಗಳಲ್ಲಿ ಚಿತ್ರಗಳನ್ನು ಬಿಡಿಸಿ ಅವುಗಳ ಹೆಸರನ್ನು ಬರೆಯಲು ಪ್ರಯತ್ನಿಸುತ್ತಾರೆ. ಈ ಪದಗಳು ಮತ್ತೆಮತ್ತೆ ಪುನರಾವರ್ತನೆಯಾದಾಗ ಅವರು ಬರೆಯಲು ಕಲಿಯುತ್ತಾರೆ. ನಾನು ಈ ಪ್ರಕ್ರಿಯೆಯನ್ನು ಮುಂದುವರೆಸುತ್ತಲೇ ಇದ್ದಾಗ ಮಕ್ಕಳು ಓದಲು ಹಾಗೂ ಚಿತ್ರ ಬಿಡಿಸಲು ಸಹಜವಾಗಿ ಹೊಂದಿಕೊಳ್ಳ–ತೊಡಗುತ್ತಾರೆ.

ಹೀಗೆಯೇ ಪಯಣ ಸಾಗುತ್ತದೆ ಹಾಗೂ ನಾನು ಕೆಲವೊಮ್ಮೆ ಹೆಸರುಗಳಿಂದ ಮತ್ತೊಮ್ಮೆ ಸಣ್ಣ ಪದ್ಯಗಳಿಂದ ಆರಂಭಿಸುತ್ತೇನೆ. ಮಕ್ಕಳು ಚಿಕ್ಕ ಹಾಗೂ ಸರಳ ಪದಗಳಿರುವ ಕವನವನ್ನು ಬೇಗ ಕಲಿಯುತ್ತಾರೆ. ಉದಾಹರಣೆಗೆ ಈ ನಾಲ್ಕು ಸಾಲಿನ ಪದ್ಯ:

ಮಜಾ ಆಗಯಾ ಖೇಲ್ ಮೇಂ,
ಭಾಲು ಭಾಗಾ ರೇಲ್ ಮೇಂ,
ಹನ್ಸ್ ಕರ್ ಬೋಲಾ ಅಚ್ಛಾ ಟಾಟಾ,
ಮೇಂ ಕರ್ ಆವೂಂ ಸೇರ್ ಸಪಾಟಾ.

ಮಕ್ಕಳು ಈ ಪದ್ಯದ ಮೂಲಕ ಪ್ರಾಸ ಪದಗಳನ್ನು ಹೇಳುತ್ತ ಸುಲಭವಾಗಿ ನೆನಪಿಟ್ಟುಕೊಳ್ಳುತ್ತಾರೆ. ಈ ರೀತಿಯಲ್ಲಿ ಸಣ್ಣ ಪದ್ಯಗಳ ಮೂಲಕ ಕೇಳುವ, ಮಾತನಾಡುವ ಹಾಗೂ ಚಟುವಟಿಕೆಗಳನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಬೆಳೆಸಬಹುದು. ನಾನು ಪ್ರಾಣಿಗಳ ಹೆಸರನ್ನು ಹೇಳಲು ಕೇಳಿದಾಗ, ಮಕ್ಕಳು ಹಲವಾರು ಸಾಕುಪ್ರಾಣಿಗಳ ಹಾಗೂ ಕಾಡುಪ್ರಾಣಿಗಳ ಹೆಸರುಗಳನ್ನು ಹೇಳಿದರು. ಈ ಪ್ರಾಣಿಗಳ ಕುರಿತು ಮಾತನಾಡಿ, ಅವುಗಳಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೇಳಿದಾಗ ಒಂದಿಬ್ಬರು ಮಕ್ಕಳನ್ನು ಹೊರತುಪಡಿಸಿ, ಉಳಿದೆಲ್ಲರೂ ಏನೋ ಒಂದನ್ನಾದರೂ ಹೇಳಿದರು. ಉದಾಹರಣೆಗೆ: ಹುಲಿ ಕಾಡಿನಲ್ಲಿ ವಾಸಿಸುತ್ತದೆ, ಹಸು ಮನೆಯಲ್ಲಿ ವಾಸಿಸುತ್ತದೆ. ಒಂದು ಪ್ರಾಣಿಯ ಹೆಸರನ್ನು ಹೇಳಿ ಅದರ ಬಗ್ಗೆ ಏನಾದರೂ ಬರೆಯಲು ಹೇಳಿದಾಗ, ಮಕ್ಕಳು ಸಣ್ಣ ವಾಕ್ಯಗಳನ್ನು ಬರೆದರು. ಕಾಗುಣಿತಗಳನ್ನು ಬರೆಯುವಾಗ ಕೆಲವು ತಪ್ಪುಗಳನ್ನು ಮಾಡಿದರೂ ನಾನು ಬರೆಯುವುದನ್ನು ತಡೆಯುವುದಿಲ್ಲ. ಏನೇ ಆದರೂ ಅವಸರದಲ್ಲಿ ಬರೆಯುವಾಗ ಮಕ್ಕಳು ತಪ್ಪು ಮಾಡುತ್ತಾರೆ.

ಇತರ ಚಟುವಟಿಕೆಗಳು

ಈ ವಯಸ್ಸಿನಲ್ಲಿ ಮಕ್ಕಳು ಕುತೂಹಲಿಗಳಾಗಿರುತ್ತಾರೆ ಹಾಗೂ ಕಲಿಯಲು ಉತ್ಸುಕರಾಗಿರುತ್ತಾರೆ. ಅವರು ನೋಟ್ ಪುಸ್ತಕದಲ್ಲಿ ಬರೆಯುವುದಕ್ಕೆ ಬದಲಾಗಿ ಬೇರೆ ಕಡೆ ಬರೆಯಲು ಬಯಸುತ್ತಾರೆ. ಹಾಗಾಗಿ ನಾನು ಅವರೊಡನೆ ಈ ಮುಂದಿನಂತೆ ಪ್ರಕ್ರಿಯೆಗಳನ್ನು ಕೈಗೊಂಡೆನು:

ಸಂದರ್ಭಕ್ಕೆ ಸಂಬಂಧಿಸಿದ ಸಂವಾದಗಳು

3ನೇ ತರಗತಿಯ ಮಕ್ಕಳ ಜೊತೆಗಿದ್ದಾಗ ಆದ ಅನುಭವವಿದು. ಮೊದಲಿಗೆ ಅವರ ಬದುಕಿನ ಸಂದರ್ಭಗಳನ್ನು ಕುರಿತು ಅವರೊಡನೆ ಮಾತನಾಡಿದೆ. ತರಗತಿಯಲ್ಲಿ ಆ ಸಂದರ್ಭಕ್ಕೆ ಸಂಬಂಧಿತ ಕೆಲವು ಚಿತ್ರಗಳನ್ನೂ ಬಿಡಿಸಿದೆ. ಆ ಚಿತ್ರಗಳ ಕುರಿತು ಮಕ್ಕಳೊಡನೆ ಚರ್ಚಿಸಿದಾಗ ಅವರು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಂಡರು. ಮಕ್ಕಳಿಗೆ ಸುಪರಿಚಿತವಾದ ಸಂದರ್ಭಗಳಿಗೆ ಸಂಬಂಧಿಸಿದಂತೆ ಅಥವಾ ಅವರ ಸುತ್ತಮುತ್ತಲಿನ ಘಟನೆಗಳ ಕುರಿತು ನಾವು ಕೇಳಿದಾಗ ಅವರು ಮುಕ್ತವಾಗಿ ಮಾತನಾಡುತ್ತಾರೆ ಎಂಬುವುದು ಸಂವಾದದ ಸಮಯದಲ್ಲಿ ಕಂಡುಬಂದಿತು.

ಪದ್ಯಗಳು ಹಾಗೂ ಕಥೆಗಳು

ಹಾಗೂ 2ನೇ ತರಗತಿಯ ಮಕ್ಕಳಿಗೆ ಸಣ್ಣ ಪದ್ಯಗಳನ್ನು ಕಂಠಪಾಠ ಮಾಡಲು ಹೇಳಲಾಯಿತು. ಮಕ್ಕಳು ಪದ್ಯಗಳನ್ನು ಬಹಳ ಇಷ್ಟಪಡುತ್ತಾರೆ ಹಾಗೂ ಬೇಗನೆ ಕಲಿತು ನೆನಪಿಟ್ಟುಕೊಳ್ಳುತ್ತಾರೆ. ಈ ಪದ್ಯಗಳನ್ನು ಗುನುಗುತ್ತಾ ಪುನರಾವರ್ತಿಸುತ್ತಿರುತ್ತಾರೆ. ಮುಖ್ಯವಾಗಿ ಪಂಚತಂತ್ರ, ಜನಪದ ಕಥೆಗಳು, ಲಾಲು ಔರ್ ಪೀಲು, ಗಿಜುಭಾಯ್‌ನ ಕಥೆಗಳು, ಕಜರಿ ಗಾಯ್ ಹಾಗೂ ಬರ್ಖಾ ಸರಣಿಗಳಿಂದ ನಾನು ಕೆಲವು ಕತೆಗಳನ್ನು ಆಯ್ಕೆ ಮಾಡಿದೆ. ಕತೆ ಕೇಳಿದ ನಂತರ ಮಕ್ಕಳು ಅದೇ ತರಹದ ತಮ್ಮದೇ ಆದ ಕತೆಗಳನ್ನು ಹೇಳಲು ಪ್ರಾರಂಭಿಸುತ್ತಾರೆ ಎಂಬುದನ್ನು ನಾನು ಗಮನಿಸಿದೆ. ಈ ಹಂತದಲ್ಲಿ ಶಿಕ್ಷಕರು ಮಕ್ಕಳನ್ನು ಅರ್ಥಮಾಡಿಕೊಂಡು ಬಹಳ ತಾಳ್ಮೆಯಿಂದ ವರ್ತಿಸಬೇಕು. ಕಥೆಗಳ ಬಗ್ಗೆ ಚರ್ಚಿಸಿದ ನಂತರ ಮಕ್ಕಳಿಗೆ ತಮ್ಮ ಅನುಭವದ ಆಧಾರದ ಮೇಲೆ ಚಿತ್ರ ಬಿಡಿಸಲು ಅಥವಾ ಬರೆಯಲು ಪ್ರೋತ್ಸಾಹಿಸಲಾಯಿತು. ಈ ರೀತಿಯ ಪ್ರೋತ್ಸಾಹದಿಂದ ಮಕ್ಕಳ ಬರವಣಿಗೆಗೆ ಒಳ್ಳೆಯ ಆರಂಭ ದೊರಕಿದಂತಾಗುತ್ತದೆ.

ಚಿತ್ರಗಳು


ತರಗತಿಯ ಪರಿಸರವನ್ನು ಆಕರ್ಷಕವಾಗಿಸಲು ನಾನು ಹಣ್ಣು ಹಾಗೂ ತರಕಾರಿಗಳ ಚಿತ್ರಗಳನ್ನು ಕಪ್ಪುಹಲಗೆಯ ಮೇಲೆ ಚಿತ್ರಿಸಿ, ಆನಂತರ ಅವರಿಗೆ ಬಿಡಿಸಲು ಹೇಳಿದೆ. ಅವರು ತಮಗೆ ಇಷ್ಟವಾದುದನ್ನೇ ಮೊದಲು ಬಿಡಿಸುತ್ತಾರೆ. ಈ ಚಟುವಟಿಕೆಯ ಸಹಾಯದಿಂದ ಮಕ್ಕಳು ಪದಗಳನ್ನು ಗುರುತಿಸಲು ಕಲಿಯುತ್ತಾರೆ,



ಅವುಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾರೆ. ಅವರು ತಮ್ಮ ಇಷ್ಟಾನಿಷ್ಟಗಳನ್ನು ಹಂಚಿಕೊಳ್ಳುತ್ತಾರೆ. ಚಿತ್ರಗಳನ್ನು ಬಿಡಿಸುವ ಅಭ್ಯಾಸದಿಂದ ಮಕ್ಕಳ ಕೈಬರಹ ಹಾಗೂ ಬರವಣಿಗೆಯ ಕೌಶಲಗಳೂ ಹೆಚ್ಚುತ್ತವೆ.

ಮಕ್ಕಳ ಸಾಹಿತ್ಯ

ನಾಲ್ಕನೆಯ ಹಂತ, ಮಕ್ಕಳು ಓದಲು ಹಾಗೂ ಬರವಣಿಗೆ ಕಲಿಯಲು ವಿಶೇಷ ಮಹತ್ವ ಹೊಂದಿರುವ ಮಕ್ಕಳ ಸಾಹಿತ್ಯ. ನನ್ನ ಬೋಧನೆಯಲ್ಲಿ ಇದನ್ನು ವ್ಯಾಪಕವಾಗಿ ಬಳಸಿಕೊಂಡಿದ್ದೇನೆ. ಮಕ್ಕಳಿಗೆ ಓದುವುದಕ್ಕೆ ಬಹಳಷ್ಟು ಅವಕಾಶಗಳನ್ನು ಕೊಟ್ಟಿದ್ದೇನೆ. ಬರ್ಖಾ ಸರಣಿಯ ಪುಸ್ತಕಗಳು ಮಕ್ಕಳ ಹಂತಕ್ಕೆ ಹೊಂದಿಕೆಯಾಗುತ್ತಿದ್ದು, ಅವರ ಕಲಿಕೆಗೆ ಇದರಿಂದ ಸಹಾಯವಾಗುತ್ತದೆ. ನನ್ನ ಶಾಲೆಯ 3ನೇ ತರಗತಿಯ ಮಕ್ಕಳೇ ಇದಕ್ಕೆ ಸ್ಪಷ್ಟ ನಿದರ್ಶನವಾಗಿದ್ದಾರೆ. ಅವರು ಸಣ್ಣ ಕಥೆಗಳಿರುವ ಬರ್ಖಾ ಸರಣಿಯ ಹಲವು ಪುಸ್ತಕಗಳನ್ನು ಓದುತ್ತಾರೆ. ಇಲ್ಲಿ ಹೆಸರುಗಳು ಹಾಗೂ ಪದಗಳು ಪುನರಾವರ್ತನೆಯಾಗುವುದರಿಂದ ಮಕ್ಕಳು ವೇಗವಾಗಿ ಕಲಿಯುತ್ತಾರೆ.


Date
Page
-! बुढ़िया और बिल्ली !-
-कहानी-
एक दिन बिल्ली जंगल में फल लेने गई।
थी। बिल्ली को प्यास लग गई थी। जंगल में एक नदी थी। बिल्ली वहाँ जाकर पानी पीने लगी। वह पानी पीके खुश होगई। वहाँ बहुत रात होगयी थी। लेकिन इसी जंगल में एक बुढ़िया आई थी। वे दोनों जाकर सोगए थे। सुबह दोनों जग गये। बुढ़िया बिल्ली को अपनी दोस्त बना ली थी। बुढ़िया बिल्ली को अपने झोंपड़ी में लेकर गई। वहाँ केक रखा हुआ था। बिल्ली खाने लगी वो दोनों एक दूसरे को केक लगाने लगी। वहाँ पर बिल्ली को खुशी मिली। बुढ़िया केक खाते ही बाद में बहुत तेज बारिश आने लगी। बिल्ली बारिश में भीग गई बिल्ली वहाँ से भाग गई।
रा० प्रा० वि० सड़ासड़ीया नविन
खटीमा ऊधम सिंह नगर
नाम - खुशी
कक्षा - 3

ಕಥೆಯ ರಚನೆ

ಕಥೆಯನ್ನು ರಚಿಸುವ ಕ್ರಿಯೆಯಲ್ಲಿ, ಮಕ್ಕಳ ಸಾಹಿತ್ಯದ ಓದುವಿಕೆಯಿಂದ, ಓದಿನಲ್ಲಿ ಆಸಕ್ತಿ ಉಂಟಾಗುವುದಲ್ಲದೇ ಬರವಣಿಗೆಯಲ್ಲೂ ಆಸಕ್ತಿ ಬೆಳೆಯುತ್ತದೆ. ಮಕ್ಕಳು ತಮ್ಮ ಓದುವಿಕೆಯಿಂದ ಹಾಗೂ ತಮಗಾದ ಅನುಭವದ ಆಧಾರದ ಮೇಲೆ ಹೊಸ ಕಥೆಯನ್ನು ರಚಿಸುತ್ತಾರೆ. ಅವರು ಎರಡನ್ನೂ ಸಮೀಕರಿಸಿ ತಮ್ಮದೇ ಆದ ಹೊಸ ಕಥೆಯನ್ನೂ ಕಟ್ಟುತ್ತಾರೆ.

ಕಳೆದ ಎರಡು ವರ್ಷಗಳಿಂದ ಮಕ್ಕಳ ಕಲಿಕೆಯೆಡೆಗಿನ ನನ್ನ ಪ್ರಯತ್ನಗಳ ಫಲಿತಾಂಶವು ಅರ್ಥಪೂರ್ಣ ರೀತಿಯಲ್ಲಿ ಇಂದು ನನ್ನ ಮುಂದಿದೆ ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ. ಮಕ್ಕಳು ಒಂದು ವಿಷಯದ ಬಗ್ಗೆ ಸ್ವಂತ ವಾಕ್ಯಗಳನ್ನು ರಚಿಸಿ ಬರೆಯುವುದಲ್ಲದೆ ಒಂದು ಸ್ವಂತ ಸಣ್ಣ ಕತೆಯನ್ನೂ ಬರೆಯುತ್ತಾರೆ. ಇದಲ್ಲದೇ ಪಠ್ಯಪುಸ್ತಕದಲ್ಲಿ ಕೊಟ್ಟಿರುವ ಅಭ್ಯಾಸಗಳನ್ನೂ ಚೆನ್ನಾಗಿ ಮಾಡುತ್ತಾರೆ. ಒಂದು ಕಥೆಯ ಬಗ್ಗೆ ಅವರ ಆಲೋಚನೆಗಳನ್ನು ಬರೆಯಲು ಹೇಳಿದಾಗ ಬಹಳಷ್ಟು ಮಕ್ಕಳು ಸೊಗಸಾದ ಕತೆಗಳನ್ನು ಬರೆದರು. ಈ ಅಭ್ಯಾಸದ ಇನ್ನೊಂದು ವೈಶಿಷ್ಟ್ಯವೆಂದರೆ ಮಕ್ಕಳು ತಮ್ಮನ್ನು ತಾವೇ ಮೌಲ್ಯಮಾಪನ ಮಾಡಿಕೊಳ್ಳುತ್ತಿದ್ದರು. ತಾವೇ ಬರೆದ ಕತೆಗಳನ್ನು ಪರಸ್ಪರ ಕೇಳುವಾಗ ನಗುತ್ತ ತಮ್ಮ ಅಭಿಪ್ರಾಯಗಳನ್ನೂ ಮುಂದಿಡುತ್ತಿದ್ದರು. 3ನೇ ತರಗತಿಯ 'ರಿಮ್‌ಝಿಮ್' ಹೆಸರಿನ ಪಠ್ಯಪುಸ್ತಕದಿಂದ 'ಕಬ್ ಆವೂಂ' ಎಂಬ ಪಾಠವನ್ನು ಬೋಧಿಸಿದಾಗ ಮಕ್ಕಳು ಹಲವಾರು ಪ್ರಶ್ನೆಗಳನ್ನು ಕೇಳಿದರು. ಬಹಳ ಎಚ್ಚರಿಕೆಯಿಂದ ಆಲೋಚಿಸಿ ಆ ಪಾಠಕ್ಕೆ ಬೇರೆ ಶೀರ್ಷಿಕೆಗಳನ್ನು ಸುಲಭವಾಗಿ ಸೂಚಿಸಿದರು. ಎಲ್ಲ ಮಕ್ಕಳೂ

ಬೇರೆಬೇರೆ ಶೀರ್ಷಿಕೆಗಳನ್ನು ಹೇಳಿದರು. ಮಕ್ಕಳು ಚುರುಕಾಗಿ ಆಲೋಚಿಸುವ ಶಕ್ತಿಯನ್ನು ಹೊಂದಿರುತ್ತಾರೆ. ಒಂದು ಮಗುವು ಪಾಠದ ಹೆಸರು 'ದುಕಾನ್‌ದಾರ್ ಔರ್ ಸೇಠ್' ಎಂದಿತು, ಎರಡನೆಯದು 'ಮೂರ್ಖ್ ಸೇಠ್' ಇರಬಹುದು ಎಂದಿತು, ಇತರ ಮಕ್ಕಳು 'ಜೈಸಿ ಕರ್‌ನಿ ವೈಸಿ ಭರ್‌ನಿ', 'ಜೈಸೆ ಕೊ ತೈಸಾ' ಇರಬಹುದು ಎಂದರು. ಪಾಠದ ಉದ್ದೇಶ ಅರ್ಥವಾಯಿತೊ ಇಲ್ಲವೋ, ಪಾಠ ಹಾಗೂ ಚಟುವಟಿಕೆಗಳನ್ನು ಬಹಳ ಉತ್ತಮವಾಗಿ ಅಭ್ಯಸಿಸಲು ಸಮರ್ಥರಾದರು ಹಾಗೂ ತಮ್ಮ ಅನುಭವವನ್ನು ಕಟ್ಟಿ ಮುಂದುವರೆಯಲು ತಯಾರಾದರು.

ಭಾಷಾ ಕಲಿಕೆಯ ಉದ್ದೇಶಗಳು

ಭಾಷೆ ಎಂಬುದು ಸಂವಹನದ ಮಾಧ್ಯಮವಷ್ಟೇ ಅಲ್ಲ ಅದು ಆಲೋಚಿಸಲು, ಅರ್ಥೈಸಲು ಹಾಗೂ ತನ್ನನ್ನು ತಾನು ಅಭಿವ್ಯಕ್ತಿಸಲು ಸಹಾಯ ಮಾಡುತ್ತದೆ. ನನ್ನ ಪ್ರಕಾರ ಭಾಷಾ ಕಲಿಕೆಯಿಂದ ಆಗಬೇಕಾದ ಕೆಲವು ಅಂಶಗಳು:

- ಆಲೋಚನೆಗಳನ್ನು ಹಂಚಿಕೊಳ್ಳುವುದು
- ಶಾಲಾ ಪರಿಸರವನ್ನು ಆರಾಮದಾಯಕವಾಗಿಸುವುದು
- ನಮ್ಮದು ಎನ್ನುವ ಭಾವನೆಯನ್ನು ಹಾಗೂ ಕಾರ್ಯ-ತತ್ಪರತೆಯನ್ನು ಬೆಳೆಸುವುದು
- ಮಾತೃಭಾಷೆಯನ್ನು ಸ್ಥಳೀಯ ಭಾಷೆಯೊಂದಿಗೆ ಸಮೀಕರಿಸಿ ಜ್ಞಾನ ವೃದ್ಧಿಸುವುದು
- ಸ್ವಂತ ಅಭಿವ್ಯಕ್ತಿಗೆ ಅವಕಾಶಗಳನ್ನು ಹುಟ್ಟುಹಾಕುವುದು
- ಮಕ್ಕಳು ಹೇಳುವುದನ್ನು ಕೇಳಿಸಿಕೊಳ್ಳುವುದು
- ಗ್ರಹಿಕೆಯುಕ್ತ ಓದಿನ ಹವ್ಯಾಸವನ್ನು ಬೆಳೆಸುವುದು
- ಸುತ್ತಮುತ್ತಲಿನ ಪರಿಸರದಲ್ಲಿ ಕಾಣಸಿಗುವ ಉಲ್ಲೇಖಗಳು ಹಾಗೂ ದೃಶ್ಯಗಳ ಆಧಾರದ ಜ್ಞಾನವನ್ನು ಪ್ರೋತ್ಸಾಹಿಸುವುದು ಹಾಗೂ ನಿರ್ಣಯಿಸಲು ಸಮರ್ಥರನ್ನಾಗಿಸುವುದು
- ಶಾಲೆಯಲ್ಲಿ ದೊರಕುವ ಜ್ಞಾನವನ್ನು ಹೊರಗಿನ ಜ್ಞಾನದೊಂದಿಗೆ ಸಮೀಕರಿಸಿ ಬೋಧಿಸುವುದು
- ಒಬ್ಬರ ಅನುಭವವನ್ನು ಕವನ ಹಾಗೂ ಕತೆಯೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಲು ಸಮರ್ಥರಾಗುವುದು
- ಒಬ್ಬರ ಆಲೋಚನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಹಾಗೂ ಆ ಕತೆಯನ್ನು ಒಬ್ಬರ ಪರಿಸರ ಮತ್ತು ಅನುಭವದೊಂದಿಗೆ ಸಂಬಂಧಿಸಲು ಸಮರ್ಥರಾಗುವುದು
- ಭಾಷಾವಿಜ್ಞಾನದ ಕೌಶಲಗಳನ್ನು ಬೆಳೆಸುವುದು
- ಸ್ವ-ಕಲಿಕೆ ಹಾಗೂ ಸ್ವ-ಬರವಣಿಗೆಯ ಅಭ್ಯಾಸವನ್ನು ಪೋಷಿಸುವುದು
- ಆತ್ಮವಿಶ್ವಾಸವನ್ನು ಹೆಚ್ಚಿಸುವುದು
- ವಸ್ತುವಿಷಯವನ್ನು ಅರ್ಥೈಸಿಕೊಂಡು ಚೆನ್ನಾಗಿ ಬರೆಯುವುದು
- ಸದಭಿರುಚಿಯನ್ನು, ಕಲ್ಪನಾಶಕ್ತಿ ಹಾಗೂ ಸೃಜನಶೀಲತೆಯನ್ನು ಬೆಳೆಸಿಕೊಳ್ಳುವುದು

ಮಕ್ಕಳು ಈಗಾಗಲೇ ಹೊಂದಿರುವ ಜ್ಞಾನವನ್ನು ಇನ್ನಷ್ಟು ವೃದ್ಧಿಸುವುದೇ ಶಿಕ್ಷಕಿಯಾದ ನನ್ನ ಕರ್ತವ್ಯ. ಭಾಷಾ ಸಮೃದ್ಧತೆಯನ್ನು ಶ್ರೀಮಂತಗೊಳಿಸಲು, ವಿವೇಚನಾ ಶಕ್ತಿಯನ್ನು ಬೆಳೆಸಲು, ಅಭಿವ್ಯಕ್ತಿಸಲು, ವಿಶ್ಲೇಷಿಸಲು, ಕಲ್ಪನಾಶಕ್ತಿಯನ್ನು ಬೆಳೆಸಲು ನಾನು ನಿರಂತರವಾಗಿ ನನ್ನನ್ನು ಹಾಗೂ ನನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲೇಬೇಕು. ಮಗುವಿನ ಬೆಳವಣಿಗೆಯಲ್ಲಿ ಶಿಕ್ಷಕಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ, ಆದರೆ ಇದರೊಂದಿಗೆ ಪೋಷಕರ ಬೆಂಬಲವೂ ಅಷ್ಟೇ ಅವಶ್ಯಕವಾಗಿರುತ್ತದೆ.

ಪರಾಮರ್ಶನ:
ಕುಮಾರ ಕೃಷ್ಣ, 'ದಿ ಚೈಲ್ಡ್ಸ್ ಲ್ಯಾಂಗ್ವೇಜ್ ಆಂಡ್ ದಿ ಟೀಚರ್', ನ್ಯಾಷನಲ್ ಬುಕ್ ಟ್ರಸ್ಟ್, ದೆಹಲಿ.
ಎನ್‌ಸಿಇಆರ್‌ಟಿ, ರಿಮ್‌ಝಿಮ್, 3ನೇ ತರಗತಿ.



ಕಮಲಾ ಭಂಡಾರಿ ಕಳೆದ 26 ವರ್ಷಗಳಿಂದ ಅಧ್ಯಾಪನ ವೃತ್ತಿಯಲ್ಲಿದ್ದಾರೆ. ಖತಿಮಾದಲ್ಲಿರುವ ಆಚಾರ್ಯ ನರೇಂದ್ರ ದೇವ್ ಎಂಬ ಖಾಸಗಿ ಶಾಲೆಯಲ್ಲಿ ಅವರು ಸುಮಾರು ಹನ್ನೊಂದು ವರ್ಷಗಳ ಕಾಲ ಶಿಕ್ಷಕಿಯಾಗಿದ್ದರು. ಪ್ರಸ್ತುತ, 2005ರಿಂದ ಸರಸದಿಯಾ ನವೀನ್‌ನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರುವ ಅವರು ಬಿ.ಎಡ್ ಹಾಗೂ ಬಿಟಿಸಿ ಪದವಿಗಳನ್ನು ಪೂರೈಸಿದ್ದಾರೆ. ಮಕ್ಕಳ ಸಾಹಿತ್ಯ ಹಾಗೂ ಸಾಮಾನ್ಯ ಜ್ಞಾನದ ಪುಸ್ತಕಗಳ ಓದುವಿಕೆ ಅವರ ಹವ್ಯಾಸಗಳಲ್ಲೊಂದು. ಅವರನ್ನು bhandarikamla10@gmail.com ಇಲ್ಲಿ ಸಂಪರ್ಕಿಸಬಹುದು.

ಅನುವಾದ: **ವಿನಯ ವಿಠ್ಠಲ್** । ಪರಿಶೀಲನೆ: **ನಾಗಮಣಿ ಎಸ್ ಎನ್**